ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 23/10/2019

# ಬಟನ್ ಒತ್ತಿದರೆ ರಕ್ಷಣೆ!

## ಬೆಂಗ್ಳೂರು ತುಂಬ ಕ್ಯಾಮರಾ | ಮಹಿಳೆ ಸುರಕ್ಷತೆಗೆ ಹೊಸ ಯೋಜನೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಅಪರಾಧ ಪ್ರಕರಣಗಳು ತೀವ್ರಗೊಳ್ಳುತ್ತಿದ್ದು, ಮಹಿಳೆಯರ ಸುರಕ್ಷತೆಯತ್ತ ಗಮನಹರಿಸಿರುವ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ವಿಶೇಷ ಯೋಜನೆ ಜಾರಿಗೆ ಮುಂದಾಗಿದೆ.

ಬೆಂಗಳೂರಿನ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ರಕ್ಷಣೆ ನೀಡಲು ಸುರಕ್ಷತಾ ದೀಪಗಳನ್ನು ಅಳವಡಿಸಲಾಗುತ್ತದೆ. ಸಂಕಷ್ಟದಲ್ಲಿರುವ ಮಹಿಳೆಯರು ದೀಪದ ಕಂಬದಲ್ಲಿರುವ ಪ್ಯಾನಿಕ್ ಬಟನ್ ಒತ್ತಿದರೆ ತಕ್ಷಣ ಕಮಾಂಡ್ ಸೆಂಟರ್‌ಗೆ ಮಾಹಿತಿ ರವಾನೆಯಾಗಲಿದೆ. ಹತ್ತಿರದ ಪೊಲೀಸ್ ಠಾಣೆ, ಸಂಚಾರಿ ದಳಕ್ಕೂ ಮಾಹಿತಿ ತಲುಪಲಿದ್ದು, ಪೊಲೀಸರು ಕೂಡಲೇ ನೆರವಿಗೆ ಧಾವಿಸಲಿದ್ದಾರೆ.

**ಕೇಂದ್ರದ ಸಹಯೋಗ:** ಕೇಂದ್ರ ಸರ್ಕಾರವು ಸೇಫ್ಟಿ ಆಫ್ ವುಮೆನ್ಸ್ ನಿರ್ಭಯಾ ಯೋಜನೆಯಲ್ಲಿ ಶೇ.60 ಅನುದಾನ ನೀಡಲಿದ್ದು, ಉಳಿದದನ್ನು ರಾಜ್ಯ ಭರಿಸಬೇಕು. ಒಟ್ಟಾರೆ 667 ಕೋಟಿ ರೂ. ಮೊತ್ತದ ಯೋಜನೆ ಸಿದ್ಧಪಡಿಸಿದ್ದು, ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ ಎಂದು ಸಚಿವ ಮಾಧುಸ್ವಾಮಿ ಸಂಪುಟ ಸಭೆ ಬಳಿಕ ವಿವರಿಸಿದರು. ಈ ಯೋಜನೆಗಾಗಿ 5,000 ಫಿಕ್ಸೆಡ್ ಕ್ಯಾಮರಾ, ತಲಾ 1 ಸಾವಿರ ಎಎನ್‌ಪಿಆರ್, ಪಿಸಿಎಕ್ಸ್ ಕ್ಯಾಮರಾ, 500 ಎಫ್‌ಆರ್‌ಎಸ್ ಕ್ಯಾಮರಾ ಬಳಸಲಾಗುತ್ತದೆ. ಸುರಕ್ಷತಾ ದೀಪಗಳ ಜಿಐಎಸ್ ಮ್ಯಾಪಿಂಗ್ ಮಾಡಲಾಗುತ್ತದೆ. ಸೈಬರ್‌ನೆಟಿಕ್ ಕಲ್ಚರ್ ರಿಸರ್ಚ್ ಯೂನಿಟ್, ಫಾರೆನ್ಸಿಕ್ ಕಿಟ್ ಸಹ ಯೋಜನೆಯಲ್ಲಿ ಒಳಗೊಂಡಿರುತ್ತದೆ.

### ನೀತಿ ಸಂಹಿತೆ ಪರಿಧಿ ಸ್ಪಷ್ಟತೆ

ಉಪ ಚುನಾವಣೆ ನಡೆಯುವ 15 ಕ್ಷೇತ್ರಗಳಲ್ಲಿ ನ.11ರಿಂದ ಡಿ. 5ರವರೆಗಿನ ನೀತಿ ಸಂಹಿತೆ ಬಗ್ಗೆ ಸರ್ಕಾರ ಸ್ಪಷ್ಟಪಡಿಸಿಕೊಂಡಿದೆ. ಗ್ರಾಮೀಣ ಕ್ಷೇತ್ರದಲ್ಲಿ ಚುನಾವಣೆ ನಡೆಯುವುದಿದ್ದರೆ ನೀತಿ ಸಂಹಿತೆ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಇಡೀ ಜಿಲ್ಲೆಯಲ್ಲೂ ಜಾರಿಯಲ್ಲಿರುತ್ತದೆ ಮತ್ತು ನಗರ ಕ್ಷೇತ್ರವಾದರೆ ಆ ಕ್ಷೇತ್ರಕ್ಕೆ ಸೀಮಿತವಾಗಿರಲಿದೆ ಎಂದು ಮಾಧುಸ್ವಾಮಿ ವಿವರಿಸಿದರು.



### 2ನೇ ಜತೆ ಸಮವಸ್ತ್ರ ಖಚಿತ

ಶಾಲಾ ಮಕ್ಕಳಿಗೆ 2ನೇ ಜತೆ ಸಮವಸ್ತ್ರ ನೀಡುವ ವಿಚಾರದಲ್ಲಿ ಸರ್ಕಾರದಲ್ಲಿದ್ದ ಗೊಂದಲ ಬಗೆಹರಿದಿದ್ದು, ಸಮವಸ್ತ್ರ ನೀಡಲು ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಜತೆಗೆ ಮುಂದಿನ ಸಾಲಿಗೆ ವಿದ್ಯಾರ್ಥಿಗಳ ಶೂ, ಸಾಕ್ಸ್ ವಿತರಣೆಗೂ ಸಮ್ಮತಿಸಲಾಗಿದೆ. ಸಮವಸ್ತ್ರ ವಿತರಣೆ ವಿಳಂಬದ ಬಗ್ಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು. ಮೊದಲ ಹಂತದಲ್ಲಿ ಸಮವಸ್ತ್ರ ವಿತರಣೆ ಮಾಡುವುದಕ್ಕೆ ಸರ್ಕಾರ 80 ಕೋಟಿ ರೂ.ವೆಚ್ಚ ಮಾಡಿದೆ.

### ಇತರ ಪ್ರಮುಖ ತೀರ್ಮಾನ

● ಕಲಬುರಗಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸ್ಥಳೀಯ ಶಾಸಕರನ್ನು ಅಧ್ಯಕ್ಷರಾಗಿ ಮಾಡುವ ನಿಟ್ಟಿನಲ್ಲಿ ತಿದ್ದುಪಡಿಗೆ ಅನುಮೋದನೆ. ಇಲ್ಲಿವರೆಗೆ ಮಂತ್ರಿಗಳಿಗೆ ಮಾತ್ರ ಅಧ್ಯಕ್ಷರಾಗುವ ಅವಕಾಶ ಇತ್ತು ● ಕೃಷಿ ಸಹಕಾರ ಮಾರಾಟ ಮಂಡಳಿಗೆ ರಸಗೊಬ್ಬರ ಖರೀದಿಗಾಗಿ 400 ಕೋಟಿ ರೂ. ಸಾಲ ಪಡೆಯಲು ಸರ್ಕಾರಿ ಖಾತ್ರಿ ● ಬೆಂಗಳೂರಿನ ಕೆಎಸ್‌ಆರ್‌ಪಿಗೆ ಸೇರಿದ ಖಾಲಿ ಜಾಗದಲ್ಲಿ 80 ಕೋಟಿ ರೂ. ನಲ್ಲಿ ಪೊಲೀಸ್ ಭವನ ನಿರ್ಮಿಸಲು ಅನುಮೋದನೆ ● ರಾಜ್ಯ ಭಾಷಾ ತಿದ್ದುಪಡಿ ಮಸೂದೆಗೆ ಅನುನೋದನೆ. ಯಾವುದೇ ವಿಧೇಯಕ ಕನ್ನಡದಲ್ಲಿ ಮಾಡಿದರೆ ಅದನ್ನು ರಾಜ್ಯಪಾಲರಿಗೆ ಕಳುಹಿಸಿ ಅನುಮೋದನೆಯಾಗಿ ಬರ ಬೇಕಾಗಿತ್ತು. ಈಗ ಇಲಾಖಾ ಮಟ್ಟದಲ್ಲೇ ಅನುಮೋದನೆ ಮಾಡಲು ತಿದ್ದುಪಡಿ ವಿಧೇಯಕ ತರಲು ನಿರ್ಧಾರ ● ನಗರ ಪ್ರದೇಶಗಳಲ್ಲಿನ 1,000 ಅಂಗನವಾಡಿ ಕಟ್ಟಡಗಳ ದುರಸ್ತಿ ಕಾರ್ಯಕ್ಕೆ 10 ಕೋಟಿ ರೂ. ● ದೇವರಾಜ ಅರಸು ಅಭಿವೃದ್ಧಿ ನಿಗಮಕ್ಕೆ 500ಕೋಟಿ ರೂ. ಇದ್ದ ಶೇರ್ ಕ್ಯಾಪಿಟಲ್ 50 ಕೋಟಿ ರೂ. ಹೆಚ್ಚುವರಿ ವಿಸ್ತರಣೆ ● ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ತಾಯಿ ಆರೋಗ್ಯ ಅಭಿವೃದ್ಧಿಗೆ ಐರನ್, ಕ್ಯಾಲ್ಸಿಯಂ ಮಾತ್ರೆಗೆ 14.35 ಕೋಟಿ ರೂ. ● ಜಲಸಂಪನ್ಮೂಲ ಇಲಾಖೆಗೆ 1000 ಕೋಟಿ ರೂ. ಸಾಲಕ್ಕೆ ಖಾತ್ರಿ ● ಹಿರೇಕೆರೂರು ತಾಲೂಕಿನ ಕೆರೆ ತುಂಬಿಸಲು 188 ಕೋಟಿ ರೂ.,170 ಕೋಟಿ ರೂ. ವೆಚ್ಚದಲ್ಲಿ ತೋರಣಗಲ್‌ನ ಹಲವು ಕೆರೆಗಳಿಗೆ ನೀರು ತುಂಬಿಸುವುದಕ್ಕೆ ಒಪ್ಪಿಗೆ ● ಬೆಂಗಳೂರಿನಲ್ಲಿ ಗುಪ್ತ ವಾರ್ತೆ ಕಟ್ಟಡ ನಿರ್ಮಾಣಕ್ಕೆ ಸಮ್ಮತಿ, ಕೆಎಸ್‌ಆರ್‌ಪಿ ಖಾಲಿ ಜಾಗದಲ್ಲಿ ಭವನ ನಿರ್ಮಾಣಕ್ಕೆ ಒಪ್ಪಿಗೆ, ಬೆಳಗಾವಿ ಕಮಿಷನರೇಟ್‌ಗೆ ಹೊಸ ಕಟ್ಟಡ, 17 ಕೋಟಿ ರೂ. ● ದೇವದುರ್ಗದಲ್ಲಿ ಮೂಲಸೌಕರ್ಯ ಕಲ್ಪಿಸಲು 92 ಕೋಟಿ ರೂ. ● 19.08 ಕೋಟಿ ರೂ. ವೆಚ್ಚದಲ್ಲಿ ಬಹುಗ್ರಾಮ ಕುಡಿವ ನೀರಿನ ಯೋಜನೆ ಮೂಲಕ ಭದ್ರಾವತಿ ತಾಲೂಕಿನ 9 ಗ್ರಾಮಗಳಿಗೆ ಕುಡಿವ ನೀರು ● ಹೊನ್ನಾಳಿ ಉಪವಿಭಾಗವಾಗಿ ಮೇಲ್ದರ್ಜೆಗೆ, ಅಜ್ಜಂಪುರ ಗ್ರಾ.ಪಂ ಅನ್ನು ಪ.ಪಂ ಆಗಿ ಮೇಲ್ದರ್ಜೆಗೆ. ಕಡಬ ಗ್ರಾ.ಪಂ ಅನ್ನು ಪ.ಪಂ ಆಗಿ ಮೇಲ್ದರ್ಜೆಗೆ ● ಕೃಷ್ಣಾನದಿಯಿಂದ ಮಾರ್ಕಾಂಡೇಯ ನದಿಗೆ ನೀರು ಹರಿಸಲು 189.97 ಕೋಟಿ ರೂ. ● ಚಿಕ್ಕಬಳ್ಳಾಪುರದಲ್ಲಿ ವಸತಿಹೀನರಿಗೆ ಮನೆ ನಿರ್ಮಿಸಲು ಕಂದಾಯ ಇಲಾಖೆಯ 96 ಎಕರೆ ಜಮೀನು ವಸತಿ ಇಲಾಖೆಗೆ ವರ್ಗ ● ದೇವರಾಜ ಅರಸು ಅಭಿವೃದ್ಧಿ ನಿಗಮದ ಚಟುವಟಿಕೆಗೆ 15 ಕೋಟಿ ರೂ. ಅನುದಾನ

2